MYSORE LEGISLATIVE ASSEMBLY

TWENTIETH DAY

Wednesday, 3rd March 1965.

The House met in the Legislative Assembly Chamber Vidhana Soudha Bangalore-1, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Confirmation of lands in favour of Takarardars in Gubbi Taluk.

*Q.—35. Sri K. LAKKAPPA (Hebbur).—

Will the Government be pleased to state :—

(*a*) whether it has come to the notice of Government that confirmation of encroached lands in—S. No. 50 of Madanahalli, Kasaba Hobli, Gubbi Taluk, is pending final orders in favour of Takarardars ;

(*b*) whether it is a fact that the cocoanut fruit yielding trees (150 in number), Arecanut trees (100) and 50 plantain trees raised by the Takarardars in the said S. No. were cut and removed on 22nd March 1964 ;

(*c*) the action they propose to take in this behalf ?

A.—Sri M. V. KRISHNAPPA (Minister for Revenue).—

(*a*) Yes.
(*b*) No.
(*c*) Does not arise in view of reply to clause (*b*).

ಶ್ರೀ ಕೆ. ಲಕ್ಕಪ್ಪ.—50 ನೇ ಸರ್ವೇ ನಂಬರಿನಲ್ಲಿ ಒತ್ತುವರಿಯಾಗಿದೆ ಎಂದು ಹೇಳಿ ಅದನ್ನು ಖಾಯಂ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಯಾವಾಗ ಹಾಕಿಕೊಂಡರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಇಬ್ಬರಿಗೆ ಆ ನಂಬರಿನಲ್ಲಿ ಕೊಟ್ಟ ಮೇಲೆ ನಾವು ಒತ್ತುವರಿ ಮಾಡಿಕೊಂಡಿದ್ದೇವೆ ನಮಗೇ ಕೊಡಿ ಎಂದು ಅರ್ಜಿ ಹಾಕಿಕೊಂಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಇದು ಎಷ್ಟು ದಿವಸದಿಂದ ಸರ್ಕಾರದಲ್ಲಿ ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಮಾರು ಎರಡು ಮೂರು ವರ್ಷದಿಂದಲೂ ಈ ಕೇಸು ನಡೆಯುತ್ತಾ ಇದೆ. ಇದು ತಕರಾರಾಗಿ ಪೋಲೀಸ್‌ನವರವರೆಗೂ ಹೋಗಿ ಕೋರ್ಟಿನಲ್ಲಿ ಇದೆ.

ಶ್ರೀ ಕೆ. ಲಕ್ಕಪ್ಪ.—ಈ ತಕರಾರು ಸರ್ಕಾರದ ಕಾನೂನಿಗೆ ಒಳಪಟ್ಟು ತಮ್ಮ ಅಧಿಕಾರದ ಅವಧಿಯಲ್ಲಿ ಇರುವಾಗಲೇ ಕೆಲವು ಜನ 150 ತೆಂಗಿನ ಮರ ಮತ್ತು 100 ಅಡಿಕೆ, ಬಾಳೆ ಮರಗಳನ್ನು ಕಡಿದಿದ್ದಾರೆ ಎಂದು ದೂರು ಕೂಡ ಕೊಟ್ಟಿದ್ದಾರೆ. ಆದು ಪೋಲೀಸ್ ಕೇಸ್ ಆಗಿದೆ ಎಂದು ಹೇಳಿದಿರಿ. ಆದರೆ ಉತ್ತರದಲ್ಲಿ (ಸಿ) ಪ್ರಶ್ನೆಗೆ ಉತ್ತರವಾಗಿ ಇದು ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ಸರ್ಕಾರ ಅವರಿಗೆ ನಷ್ಟವಾಗಿರುವುದಕ್ಕೆ ಏನಾದರೂ ತುಂಬಿ ಕೊಡಲು ಆದೇಶ ನೀಡಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರಿಗೆ ಜಮೀನು ಕೊಟ್ಟಿತ್ತೋ ಅವರಿಗೆ ಕೊಡುವುದರೊಳಗೆ ಬೇರೆ ಒಂದು ಪಾರ್ಟಿಯವರು ಅವರ ಹೆಸರು ತಕರಾರುದಾರರು ಅಂತ ಆ ತಕರಾರುದಾರರು ತೆಂಗಿನ ಮರ ಇದೆ ಅದನ್ನು ನಮಗೆ ಮಾರಬೇಕೆಂದು ಬರೆದಿದ್ದರು, ಅವರವರಲ್ಲೇ ಜಗಳ ಆಗಿ ತಕರಾರುದಾರರು ತೆಂಗಿನ ಮರಗಳನ್ನು ಕಡಿದು ಹಾಕಿದರು ಎಂದು ಹೇಳಿ ಪೋಲೀಸ್ ರಿಪೋರ್ಟ್ ಕೊಟ್ಟರು. ಪೋಲೀಸ್ ರಿಪೋರ್ಟಿನ ವಿವರಗಳು ನಮಗೆ ಬಂದಿದೆ, ಆವರು ಎನ್‌ಕ್ವೈರಿ ಮಾಡಿದ್ದಾರೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಟಿ. ಟಿ. ವಸೂಲು ಮಾಡಿರುವುದಕ್ಕೆ ದಾಖಲೆ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—10 ಗುಂಟೆ ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ರೆಕಾರ್ಡ ಇದೆಯೇ ವಿನಾ 10 ಗುಂಟೆಗೆ ಟಿ. ಟಿ. ವಸೂಲು ಮಾಡಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈಗಲಾದರೂ ಈ ಕೇಸನ್ನು ಪುನರ್ವಿಮರ್ಶೆಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಪೀಲು ಹೋದರೆ ಮಿನಿಷ್ಟರಿಗೆ ಅಧಿಕಾರವಿರುವುದಿಲ್ಲ. ಅಪೀಲಿನ ಮೇಲೆ ಡಿ. ಸಿ. ಅವರು ರಿಜೆಕ್ಟ್ ಮಾಡಿದರೆ ಕೋರ್ಟಿಗೆ ಹೋಗಬೇಕಾಗುತ್ತದೆ. ನನಗೆ ಅಧಿಕಾರ ಇದ್ದಿದ್ದರೆ ಪ್ರಯತ್ನ ಪಡಬಹುದಾಗಿತ್ತು.

Civil Engineering Diploma Holders that are without Employment in the state.

*Q.—87. Sri ANDANAIAH (Kunigal).—

Will the Government be pleased to state :—

(*a*) the number of Diploma Holders in Civil Engineering in the State that are without employment and since how many years are unemployed ;

(*b*) the number of Diploma Holders that have applied for appointment to the Chief Engineer during the current years and how many of them have been appointed (Community-war information may be furnished) ?

A.—Sri VEERENDRA PATIL (Minister for Public Works).—

(*a*) 1,123 as on 30th November 1964, unemployed since 1961-64.

(*b*) Applied 600, appointed 69 (60 Non- Scheduled Castes and 9 Scheduled Castes) Community-war information is not readily available.

ಶ್ರೀ ಅಂದಾನಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ 1961 ರಿಂದ 1,123 ಜನ ಇನ್ನೂ ಉದ್ಯೋಗವಿಲ್ಲದೆ ಇದ್ದಾರೆ ಎಂದು ಹೇಳಿದ್ದಿರಿ. ಅವರಿಗೆ ಉದ್ಯೋಗ ಒದಗಿಸುವುದಕ್ಕೆ ಸರ್ಕಾರ ಏನಾದರೂ ಏರ್ಪಾಡು ಮಾಡಿದೆಯೇ ?

Sri G. B. SHANKARA RAO.–In our State for these Diploma Holders, there are no sufficient number of vacancies. Candidates who desire to